ಈ ದಿನ ದಿನಾಂಕಃ 14-02-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

1 , 3 ಮತ್ತು 5ನೇ ಪ್ರತಿವಾದಿಗಳು ನನ್ನ ವಿರುದ್ಧ ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆಗಳಲ್ಲಿ 1 , 3 ಮತ್ತು 5 ನೇ ಪ್ರತಿವಾದಿಗಳು ತಾವು ಸ್ವಾಧೀನದಲ್ಲಿ ಇರುವ ಆಸ್ತಿಗಳಿಗೆ ಸಲ್ಲಿಸಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿಯ ಸರ್ವೆ ನಂಬರ್ 9, 3ನೇ ಪ್ರತಿವಾದಿಯ ಸರ್ವೆ ನಂಬರ್ 8/7, 5ನೇ ಪ್ರತಿವಾದಿಯ ಸರ್ವೆ ನಂಬರ್ 13/1ಪಿ3 . ಸರ್ವೆ ನಂಬರ್ 9 ರಲ್ಲಿ ಒಟ್ಟು ವಿಸ್ತೀರ್ಣ 12 ಎಕರೆ 24 ಗುಂಟೆ ಎಂದರೆ ಸಾಕ್ಷಿಯು 7 ಗುಂಟೆ ಖರಾಬು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್ ನಲ್ಲಿ 7 ಗುಂಟೆ ಖರಾಬು ಒಟ್ಟು ವಿಸ್ತೀರ್ಣ 12 ಎಕರೆ 24 ಗುಂಟೆಗೆ ಸೇರ್ಪಟ್ಟಿರುತ್ತದೆ. 1 ಮತ್ತು 2ನೇ ಪ್ರತಿವಾದಿ ಹಾಗೂ ಸುವರ್ಣಮ್ಮ , ಪುರಂದರ ನನ್ನ ವಿರುದ್ಧ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ , ಚನ್ನಗಿರಿ ಯಲ್ಲಿ ಅಸಲು ದಾವಾ ಸಂಖ್ಯೆ 19/2018 ರಂತೆ ದಾವಾ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ 2019 ನೇ ಸಾಲಿನಲ್ಲಿ ಶಾಶ್ವತ ನಿರ್ಬಂದಕಾಜ್ಞೆ ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿ ದಾವಾ ತೀರ್ಪಿನ ವಿರುದ್ದ ಮಾನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಹಾಗೂ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಮೇಲ್ಮನವಿಯಲ್ಲಿ ತಡೆಯಾಜ್ಞೆ ಇರುವುದಿಲ್ಲ.

2. ದಾವಾ ಸ್ವತ್ತು ಪಟ್ಟಿಯಲ್ಲಿ ನಮೂದಿಸಿರುವ ಸರ್ವೆ ನಂಬರ್ 5 , 7, 8, 9, 12, 13, 2ರ ಎಲ್ಲಾ ಸದರಿ ಆಸ್ತಿಗಳ ಮಾಲಿಕರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಮೂವರನ್ನು ಮಾಡಿರುತ್ತೇವೆ , ತಕರಾರು ತೆಗೆದವರನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಮೂರನೇ ಪ್ರತಿವಾದಿ ಸಲ್ಲಿಸಿರುವ ದಾವೆಯಲ್ಲಿ ನನ್ನ ವಿಚಾರಣೆ ಆಗಿರುತ್ತದೆ. ಮೂರನೇ ಪ್ರತಿವಾದಿ ಸಲ್ಲಿಸಿರುವ ದಾವೆಯಲ್ಲಿ ನಾನು ಕಂದಾಯ ಅಧಿಕಾರಿಗಳು , ಸರ್ವೆ ಅಧಿಕಾರಿಗಳು ಹಾಗೂ ಪೋಲೀಸ್ ಅಧಿಕಾರಿಗಳು 2018ರ ಜನವರಿ ತಿಂಗಳಿನಲ್ಲಿ ಸರ್ವೆ ನಂಬರ್ 9 ಕ್ಕೆ ಹೋಗಿರುತ್ತೇವೆ ಎಂದರೆ ಸಾಕ್ಷಿಯು ನಾನು ಹೋಗಿರುವುದಿಲ್ಲ, ಕಂದಾಯ ಅಧಿಕಾರಿಗಳು, ಸರ್ವೆ ಅಧಿಕಾರಿಗಳು ಹಾಗೂ ಪೋಲೀಸರು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನೀಡಿದ ಅರ್ಜಿಯ ಮೇರೆಗೆ ಸದರಿ ಅಧಿಕಾರಿಗಳು ಸರ್ವೆ ನಂಬರ್ 9 ಕ್ಕೆ ಹೋಗಿರುತ್ತಾರೆ. ಸದರಿ ಸ್ಥಳದಲ್ಲಿ ಅಧಿಕಾರಿಗಳು ಭೇಟಿ ನೀಡಿದಾಗ ಮಾಡಿದ ಅಳತೆಯ ವಿಚಾರ ನನಗೆ ಗೊತ್ತಿಲ್ಲ. ಅಧಿಕಾರಿಗಳು ರಸ್ತೆ ಮಾಡುವ ಸಲುವಾಗಿ ಸದರಿ ಸ್ಥಳಕ್ಕೆ ಭೇಟಿ ಕೊಟ್ಟಿರುತ್ತಾರೆ. ಆಗ ಎದುರುದಾರರು ರಸ್ತೆ ಮಾಡಲು ಬಿಟ್ಟಿರುವುದಿಲ್ಲ ಎಂದರೆ ಸರಿ.

3. ನಿಪಿ.15 ನಕಾಶೆ ಕಂಡ ದಾರಿ ಸ್ಕೆಚ್ ನಲ್ಲಿ ಆಯಾ ಸರ್ವೆ ನಂಬರ್ ನ ಮಾಲೀಕರು ಒತ್ತುವರಿ ಮಾಡಿರುವುದಾಗಿ ನಮೂದಾಗಿರುತ್ತವೆ ಎಂದರೆ ಸರಿ. ಒತ್ತುವರಿಯನ್ನು ತೆರವು ಮಾಡಿ ರಸ್ತೆಯನ್ನು ಮರು ನಿರ್ಮಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 07.01.2018 ರಂದು ರಸ್ತೆ ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.15 ನ್ನು 17.01.2018 ರಂದು ತಯಾರಿಸಿರುತ್ತಾರೆ ಎಂದರೆ

ಸರಿ. ರಸ್ತೆಯನ್ನು ತೆರವು ಗೊಳಿಸಿರುವುದಾಗಿ ಕಂದಾಯ ಅಥವಾ ಸರ್ವೆ ಮತ್ತು ಪೋಲೀಸ್ ಇಲಾಖೆಯಿಂದ ಯಾವುದೇ ದಾಖಲೆ ಇರುವುದಿಲ್ಲ. 1903 ರಲ್ಲಿ ನಕಾಶೆ ಕಂಡ ದಾರಿ ಸ್ಕೆಚ್ ತಯಾರಾಗಿರುತ್ತದೆ ಎಂದರೆ ಸರಿ. 1903ರ ನಕಾಶೆ ಕಂಡ ದಾರಿ ಸ್ಕೆಚ್ ನಂತರ ಗ್ರಾಮ ನಕ್ಷೆಯಲ್ಲಿ ನಂತರದಲ್ಲಿ ಆದ ರಸ್ತೆಗಳನ್ನು ತೋರಿಸಿರುವುದಿಲ್ಲ. ನಿಪಿ.15 ರಲ್ಲಿ ಕಾಣುವ ಒತ್ತುವರಿಯು ಸುಮಾರು 30 ವರುಷಗಳ ಹಿಂದಿನಿಂದಲೂ ಒತ್ತುವರಿಯಾಗಿರುತ್ತದೆ. ಸುಮಾರು 50-60 ವರುಷಗಳಿಂದ ನಕಾಶೆ ಕಂಡ ದಾರಿಯಲ್ಲಿ ಯಾರೂ ಸಂಚರಿಸದೇ ಇರುವುದರಿಂದ ಸದರಿ ಸ್ಥಳವನ್ನು ಸಾಗುವಳಿಗಾಗಿ ಉಪಯೋಗಿಸಿಕೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ. ಒತ್ತುವರಿಯಾಗಿರುವ ಜಮೀನು ಸಾಗುವಳಿಯಲ್ಲಿ ಇದೆ ಎಂದರೆ ಸರಿ. ಚಿರಡೋಣಿಯಿಂದ ದೊಡ್ಡಘಟ್ಟಕ್ಕೆ ಆಗಿರುವ ರಸ್ತೆ 1972 ನೇ ಸಾಲಿನಲ್ಲಿ . ಸದರಿ ರಸ್ತೆ ಆದ ನಂತರ ನಕಾಶೆ ಕಂಡ ದಾರಿ ಸಂಪೂರ್ಣವಾಗಿ ಒತ್ತುವರಿಯಾಗಿರುತ್ತದೆ ಎಂದರೆ ಸರಿ. ಹಾಗಾಗಿ ಚಿರಡೋಣಿಯಿಂದ ದೊಡ್ಡಘಟಕ್ಕೆ ಆಗಿರುವ ರಸ್ತೆಯ ಮೂಲಕ ಎಲ್ಲಾ ಸರ್ವೆ ನಂಬರ್ ಗಳ ಜಮೀನಿಗೆ ಓಡಾಡಬಹುದು ಎಂದರೆ ಸರಿಯಲ್ಲ.

ಪ್ರತಿವಾದಿ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಚನ್ನಗಿರಿ.